12

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 11.

ಬೆಂಗಳೂರು, ಗುರುವಾರ, ಮಾರ್ಚ್ ತಾ|| 17, ಸ್ ಸ್ 1904.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ಕೆಸಿಡೆಂಟರು, ಚೀಫ್ ಜಡ್ಜ್‌ಗಳು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್—ನಂ. 50.

ತಾರೀಖು 2ನೆ ಮಾಹೆ ಮಾರ್ಚ್ ಸ್ ಸ್ 1904ನೆ ಇಸವಿ.

ಮೈಸೂರು ಸೀಮೆಯ ಕಾನನದ ಇಲಾಖಾ ಡೈರೆಕ್ಟರವರ ಅಸಿಸ್ಟೆಂಟರು ಮಿ| ರಾ| ಆರ್. ನರಸಿಂಹಾಚಾರಿ, ಎಂ. ಎ. ಯವರಿಂದ ರಚಿಸಲ್ಪಟ್ಟ "ನಗೆಗಡಲು" ಎಂಬ ಪುಸ್ತಕವು ವರ್ನಾಕ್ಯುಲರ್ ಮತ್ತು ಆಂಗ್ಲೋ ವರ್ನಾಕ್ಯುಲರ್ ಮಿಡಲ್ ಸ್ಕೂಲುಗಳಿಗೋಸ್ಕರ ಬಹುಮಾನ ಪುಸ್ತಕವಾಗಿ ನಿಯಮಿಸಲ್ಪಟ್ಟಿರುತ್ತೆ. ಇದರ ಕ್ರಯ ಪ್ರತಿಯೊಂದಕ್ಕೆ 5 ಆಣೆಗಳು. ಇದನ್ನು ಗ್ರಂಥಕರ್ತರಿಂದ ಕ್ರಯಕ್ಕೆ ಪಡೆಯಬಹುದು.

ಹೆಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ತುಮಕೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕು ಮಾವತ್ತೂರು ತಲಾವು ಅಚ್ಚಕಟ್ಟಿಗೆ ಸೇರಿದ ಫಡ ಜವಿನಾನುಗಳು 1904ನೆ ಇಸವಿ ಮಾರ್ಚ್ 30ನೆ ಮಾಹೆಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 157—158 ಪ 159ನೆ ಪುಟಗಳಲ್ಲಿ 1904ನೆ ಮಾರ್ಚ್ 3ನೆ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಘೋಷಿಸಿಗಿ ಇದೆ.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡಪ್ಯುಟಿ ಕಮಿಷನರ್.